ಈ ಅಳತೆ ಗೋಲಿನ ವ್ಯಾಪ್ತಿಗೆ ಬಾರದಿರುವ ಗ್ರಾಮ: ಹ್ಯಾಮ್ಲೆಟ್‌ಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತನೆ ಮಾಡಿರುವುದಿಲ್ಲ.

ಆ. ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಇ. ಈಗಿರುವ ಮಾನದಂಡವನ್ನು: ಅಳತೆಗೋಲನ್ನು ಸಡಿಲಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಆದಾದ ನಂತರ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಬೀದರ್ ಜಿಲ್ಲೆಯಲ್ಲಿ ಹೊಸ ಸೇತುವೆಗಳ ನಿರ್ಮಾಣ

899 (1530) - ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೀದರ್ ಜಿಲ್ಲೆಯಲ್ಲಿ ಈ ಸಾಲಿನಲ್ಲಿ ಎಷ್ಟು ಹೊಸ ಸೇತುವೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹಾಕಿಕೊಳ್ಳಲಾಗಿದೆ;

ಆ. ಈ ಸೇತುವೆಗಳ ಪೈಕಿ ಯಾವ ಯಾವ ಸೇತುವೆಗಳು ಅಂತರ ರಾಜ್ಯಗಳಲ್ಲಿ ಸಂಪರ್ಕವನ್ನು ಕಲ್ಪಿಸುತ್ತವೆ;

ಇ. ಇದಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಈ ಹಣಕಾಸು ವರ್ಷದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ರಾಜ್ಯ ಸಚಿವರು) :

ಅ. ಬೀದರ್ ಜಿಲ್ಲೆಯಲ್ಲಿ 2002-03ರಲ್ಲಿ ಯಾವುದೇ ಹೊಸ ಸೇತುವೆ ನಿರ್ಮಾಣದ ಬಗ್ಗೆ ಗುರಿ ಹಾಕಿಕೊಂಡಿರುವುದಿಲ್ಲ.

ಆ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಭಟ್ಕಳ ಕ್ಷೇತ್ರದ ಮುಜರಾಯಿ ಇಲಾಖೆಯ ದೇವಸ್ಥಾನಗಳು

900 (1123) - ಶ್ರೀ ನಾಯಕ್ ಜೆ.ಡಿ. (ಭಟ್ಕಳ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮುಜರಾಯಿ ಇಲಾಖೆ ಅಡಿಯಲ್ಲಿ ಬರತಕ್ಕ ದೇವಸ್ಥಾನಗಳ ವಿವರಗಳನ್ನು ಒದಗಿಸುವುದು?

2. ಮುಜರಾಯಿ ಇಲಾಖೆಯ ನಿಯಮಗಳಂತೆ ದೇವಸ್ಥಾನಗಳಿಗೆ ಯಾವಾಗ ಸಮಿತಿಗಳನ್ನು ರಚಿಸಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ವಿಧಾನ ಸಭಾ ಕ್ಷೇತ್ರದಲ್ಲಿ ಬಿ.ಪಿ.ಟಿ. ಕಾಯ್ದೆ 1950 ರಡಿ 76 ದೇವಾಲಯಗಳು ನೊಂದಣಿಯಾಗಿದ್ದು ಪಟ್ಟಿ ಲಗತ್ತಿಸಿದೆ.

2. ಬೆಳಗಾಂ ವಿಭಾಗದಲ್ಲಿ ಬಿ.ಪಿ.ಟಿ. ಕಾಯ್ದೆ 1950 ಜಾರಿಯಲ್ಲಿರುವುದರಿಂದ ಈ ಕಾಯ್ದೆ ಅಡಿ ನೊಂದಾಯಿಸಲ್ಪಟ್ಟ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಅವುಗಳ ಸಮಿತಿಯನ್ನು ತಾವೇ ರಚಿಸುವ ಅಧಿಕಾರ ಹೊಂದಿರುವುದರಿಂದ ಸರ್ಕಾರದ ಹಂತದಲ್ಲಿ ಸಮಿತಿ ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.